# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನಲ್ಲಿ ಪ್ರಸ್ತಾಪಿಸಿರುವ "ಅರಿವಿನ ಸಿಂಚನ" ಹೊಸ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಏಕಕಡತ ಸಂಖ್ಯೆ: ಇಸಿ/ಹೊ.ಯೋ/03/ಅರಿವಿನ ಸಿಂಚನ/2016-17.

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ:158ರಲ್ಲಿ "ಅರಿವಿನ ಸಿಂಚನ" ವಿಕಲಚೇತನರ ಪೋಷಕರಿಗೆ/ ಸಮುದಾಯಕ್ಕೆ ಅರಿವು, ಸ್ಫೂರ್ತಿ ಮೂಡಿಸುವ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ. ಅಂಗವಿಕಲರಿಗೆ ಸೂಕ್ತ ಸಾಧನ ಸಲಕರಣೆ, ಅಡೆತಡೆರಹಿತ ವಾತಾವರಣ, ವಿಶೇಷ ಶಿಕ್ಷಣ, ಅವಶ್ಯಕ ಥೆರಪಿ ಚಿಕಿತ್ಸೆ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ದೊರೆತಲ್ಲಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆದೊಯ್ಯಬಹುದಾಗಿದೆ. ಇವರಿಗೆ ಪೋಷಕರ, ಶಿಕ್ಷಕರ, ಸಮಾಜದ ಬೆಂಬಲದ ಅಗತ್ಯತೆಯಿದ್ದು, ಈ ನಿಟ್ಟಿನಲ್ಲಿ ದೃಷ್ಟಿದೋಷವುಳ್ಳ, ದೈಹಿಕ ಅಂಗವಿಕಲ, ಶ್ರವಣದೋಷವುಳ್ಳ, ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ, ಬಹುವಿಧದ ಅಂಗವಿಕಲತೆ ಹಾಗೂ ಮಾನ್ಯಸಿಕ ಅಸ್ವಸ್ಥರು ಸೇರಿದಂತೆ ವಿಕಲಚೇತನರ ತಂದೆ ತಾಯಿ, ಪೋಷಕರಿಗೆ ಅವರ ಕರ್ತವ್ಯ/ ಜವಾಬ್ದಾರಿಗಳ ಬಗ್ಗೆ ಅರಿವು/ ಜವಾಬ್ದಾರಿ ಮೂಡಿಸುವುದು ಅಗತ್ಯವಿರುತ್ತದೆ. ಅವರಿಗೆ ಆತ್ಮ ಸ್ಥೈರ್ಯ ಹೆಚ್ಚಿಸಿ ಅವರು ಅಂಗವಿಕಲ ಮಕ್ಕಳನ್ನು ತಮ್ಮ ಕುಟುಂಬದ ಗೌರವಾನ್ವಿತ ಸದಸ್ಯರೆಂದು ಬಾವಿಸುವುದು ಅವಶ್ಯಕವಿರುತ್ತದೆ.

ಸಾಧನೆಗೈದಂತಹ ಅನೇಕ ಅಂಗವಿಕಲರು ಪ್ರಸಿದ್ಧಿ ಹೊಂದಿ ಸಮಾಜದಲ್ಲಿ ಗೌರವದಿಂದ ಬಾಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಇಂತಹ ಸಾಧಕರ ಸಾಧನೆ ಹಾಗೂ ಜೀವನ ಚರಿತ್ರೆಯು ಇತರ ಅಂಗವಿಕಲರಿಗೆ ಸ್ಫೂರ್ತಿಯಾಗುವ ಹಿನ್ನೆಲೆಯಲ್ಲಿ ವಿಕಲಚೇತನ ಪೋಷಕರಿಗೆ, ಸಮುದಾಯಕ್ಕೆ, ಅರಿವು ಮೂಡಿಸುವುದು ಅತ್ಯಗತ್ಯವಿರುತ್ತದೆಂದು ನಿರ್ದೇಶಕರು ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ರೂ. 150.00 ಲಕ್ಷಗಳ ಆಯವ್ಯಯದ ಅವಶ್ಯಕತೆಯಿದ್ದು, ಸದರಿ ಆಯವ್ಯಯವನ್ನು ಲೆಕ್ಕ ಶೀರ್ಷಿಕೆ:2235-02-101-0-53 ಯೋಜನೆಯಡಿ ಒದಗಿಸಲು ಆಡಳಿತಾತ್ಮಕ ಮಂಜೂರಾತಿ ಆದೇಶವನ್ನು ನೀಡುವಂತೆ ಮೇಲೆ ಓದಲಾದ ಏಕಕಡತದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2016, ಬೆಂಗಳೂರು, ದಿನಾಂಕ:16.05.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ 2016-17ನೇ ಸಾಲಿನಲ್ಲಿ ಪ್ರಸ್ತಾಪಿಸಿರುವ "ಅರಿವಿನ ಸಿಂಚನ" ಹೊಸ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ: ಶೀರ್ಷಿಕೆ:2235-02-101-0-53 (ಯೋಜನೆ)ರಡಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 278 ವೆಚ್ಚ-3 2016, ದಿ:27.04.2016 ಮತ್ತು ಪಿಡಿ 21 ಐಎಂಎಂ 2016, ದಿ:06.05.2016ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) 16/5/2016
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ,2ನೇ ಮಹಡಿ,ರಿಸಲ್ದಾರ್ ಗಸ್ತಿ, ಶೇಷಾದ್ರಿ ಪುರಂ,ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 & 9), ವಿಧಾನ ಸೌಧ, ಬೆಂಗಳೂರು
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ, ಪ್ರತಿಗಳು.

## ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2016, ದಿನಾಂಕ 16-05-2016ಕ್ಕೆ ಅನುಬಂಧ

2016-17ನೇ ಸಾಲಿನ ಆಯವ್ಯಯ ಭಾಷಣದ ಕ್ರಮ ಸಂಖ್ಯೆ:158ರಲ್ಲಿ "ಅರಿವಿನ ಸಿಂಚನ" ವಿಕಲಚೇತನರ ಪೋಷಕರಿಗೆ/ ಸಮುದಾಯಕ್ಕೆ ಅರಿವು, ಸ್ಪೂರ್ತಿ ಮೂಡಿಸುವ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ. ಅಂಗವಿಕಲರಿಗೆ ಸೂಕ್ತ ಸಾಧನ ಸಲಕರಣೆ, ಅಡೆತಡೆರಹಿತ ವಾತಾವರಣ, ವಿಶೇಷ ಶಿಕ್ಷಣ, ಅವಶ್ಯಕ ಥೆರಪಿ ಚಿಕಿತ್ಸೆ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ದೊರತಲ್ಲಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆದೊಯ್ಯಬಹುದಾಗಿದೆ. ಇವರಿಗೆ ಪೋಷಕರ, ಶಿಕ್ಷಕರ, ಸಮಾಜದ ಬೆಂಬಲದ ಅಗತ್ಯತೆಯಿದ್ದು, ಈ ನಿಟ್ಟಿನಲ್ಲಿ ದೃಷ್ಟಿದೋಷವುಳ್ಳ, ದೈಹಿಕ ಅಂಗವಿಕಲ, ಶ್ರವಣದೋಷವುಳ್ಳ, ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ, ಬಹುವಿಧದ ಅಂಗವಿಕಲತೆ ಹಾಗೂ ಮಾನಸಿಕ ಅಸ್ವಸ್ಥರು ಸೇರಿದಂತೆ ವಿಕಲಚೇತನರ ತಂದೆ ತಾಯಿ, ಪೋಷಕರಿಗೆ ಅವರ ಕರ್ತವ್ಯ/ ಜವಾಬ್ದಾರಿಗಳ ಬಗ್ಗೆ ಅರಿವು/ ಜವಾಬ್ದಾರಿ ಮೂಡಿಸುವುದು ಅಗತ್ಯವಿರುತ್ತದೆ. ಅವರಿಗೆ ಆತ್ಮ ಸ್ಥೈರ್ಯ ಹೆಚ್ಚಿಸಿ ಅವರು ಅಂಗವಿಕಲ ಮಕ್ಕಳನ್ನು ತಮ್ಮ ಕುಟುಂಬದ ಗೌರವಾನ್ವಿತ ಸದಸ್ಯರೆಂದು ಬಾವಿಸುವುದು ಅವಶ್ಯಕವಿರುತ್ತದೆ.

ಸಾಧನೆಗೈದಂತಹ ಅನೇಕ ಅಂಗವಿಕಲರು ಪ್ರಸಿದ್ಧಿ ಹೊಂದಿ ಸಮಾಜದಲ್ಲಿ ಗೌರವದಿಂದ ಬಾಳುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಇಂತಹ ಸಾಧಕರ ಸಾಧನೆ ಹಾಗೂ ಜೀವನ ಚರಿತ್ರೆಯು ಇತರೆ ಅಂಗವಿಕಲರಿಗೆ ಸ್ಪೂರ್ತಿಯಾಗುವ ಹಿನ್ನೆಲೆಯಲ್ಲಿ ವಿಕಲಚೇತನ ಪೋಷಕರಿಗೆ, ಸಮುದಾಯಕ್ಕೆ, ಅರಿವು ಮೂಡಿಸುವುದು ಅತ್ಯಗತ್ಯವಿರುತ್ತದೆ.

ಉದ್ದೇಶ:

1. ಅರಿವಿನ ಸಿಂಚನ ಕಾರ್ಯಕ್ರಮದಿಂದ ಪೋಷಕರಿಗೆ, ಸಮುದಾಯಕ್ಕೆ, ಅಂಗವಿಕಲರ ಬಗ್ಗೆ ಗೌರವ ಆತ್ಮವಿಶ್ವಾಸ ಹೆಚ್ಚಿಸಲು ಅವಕಾಶ ಮಾಡಿಕೊಡುವುದು.
2. ಪ್ರತಿಭೆ/ ಸಾಹಸ/ ಸಾಧನೆಗಳನ್ನು ಮಾಡಿದ ಅಂಗವಿಕಲರ ಬಗ್ಗೆ ಪ್ರಚಾರಪಡಿಸಿ ಇತರ ಅಂಗವಿಕಲರಲ್ಲಿ ಸ್ಪೂರ್ತಿ ಮೂಡಿಸುವುದು.
3. ಅಂಗವಿಕಲರನ್ನು ಕುಟುಂಬದಲ್ಲಿ ಗೌರವಾನ್ವಿತ ಸದಸ್ಯರನ್ನಾಗಿ ರೂಪಿಸುವುದು.

ಪ್ರಮುಖ ಕಾರ್ಯಕ್ರಮಗಳು:

1. ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಮತ್ತು ಸಾಮಾನ್ಯ ಶಾಲೆಗಳಲ್ಲಿ ಮಕ್ಕಳಿಗೆ ಹಾಗೂ ಪೋಷಕರಿಗೆ/ಸಮುದಾಯಕ್ಕೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
2. ಆಲ್ ಇಂಡಿಯಾ ರೇಡಿಯೋ/ದೂರದರ್ಶನ (AIR/DD) ದಲ್ಲಿ ಪ್ರತಿ ತಿಂಗಳು ಕನಿಷ್ಠ ಒಂದು ಗಂಟೆಯ ಕಾಲ ವಿಕಲಚೇತನರ ಪ್ರತಿಭೆ/ಸಾಹಸ/ಸಾಧನೆಗಳನ್ನು ಮಾಡಿರುವ ವ್ಯಕ್ತಿಗಳಿಂದ ಸಂದರ್ಶನ ಪಡೆದು ಪ್ರಸಾರಗೊಳಿಸುವುದು.
3. ಎಲ್ಲಾ ಗ್ರಾಮ ಮಟ್ಟಗಳಲ್ಲಿ ಅರಿವಿನ ಸಭೆ ನಡೆಸಿ ಸಮುದಾಯದಲ್ಲಿ ಅರಿವು ಮೂಡಿಸುವುದು.
4. ಎಲ್ಲಾ ಗ್ರಾಮ ಮಟ್ಟದಲ್ಲಿ ಮನೆ ಮನೆಗೂ ಇಲಾಖೆಯ ಯೋಜನೆಗಳ ವಿವರಗಳನ್ನು ಹೊಂದಿರುವ ಭಿತ್ತಿ ಪತ್ರಗಳನ್ನು ಹಂಚುವುದು.
5. ಗ್ರಾಮ ಪಂಚಾಯತ್, ತಾಲ್ಲೂಕು ತಹಶೀಲ್ದಾರ್ ಹಾಗೂ ಪಂಚಾಯತ್ ಕಛೇರಿಗಳಲ್ಲಿ ಇಲಾಖಾ ಯೋಜನೆಗಳ ಬಗ್ಗೆ ಹೋರ್ಡಿಂಗ್ಸ್/ಬೋರ್ಡ್‌ಗಳನ್ನು ಅಳವಡಿಸುವುದು.
6. ತಾಲ್ಲೂಕು ಮಟ್ಟದಲ್ಲಿ ಅಂಗವಿಕಲರ ದಿನಾಚರಣೆಯನ್ನು ಆಚರಿಸುವುದು.
7. ಶಾಲೆಗಳಲ್ಲಿ ಅಂಗವಿಕಲರ ಸಾಧನೆ/ ಇತರೆ ವಿಷಯಗಳ ಬಗ್ಗೆ ಅರಿವಿನ ಕಾರ್ಯಕ್ರಮಗಳನ್ನು ನಡೆಸುವುದು

<u>ಯೋಜನೆ ಅನುಷ್ಠಾನ:</u>

ಈ ಯೋಜನೆಯನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುವುದು. ಪ್ರತಿ ಜಿಲ್ಲೆಗೆ ಬಿಡುಗಡೆಯಾಗುವ ಅನುದಾನದಲ್ಲಿ ತಾಲ್ಲೂಕು ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುದಾನದ ಹಂಚಿಕೆ ಮಾಡಿಕೊಂಡು ಕಾರ್ಯಕ್ರಮಗಳನ್ನು ನಿರ್ವಹಿಸಬೇಕು. ಈ ಕಾರ್ಯಕ್ರಮಗಳನ್ನು ಅಂಗವಿಕಲರ ಸಮೀಕ್ಷೆಯ ಆಧಾರದ ಮೇಲೆ ರೂಪಿಸಿಕೊಳ್ಳಬೇಕು. ವಾರ್ಷಿಕ ಕ್ರಿಯಾ ಯೋಜನೆಯ ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಜಿಲ್ಲೆಗಳಿಗೆ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.115.48ರಷ್ಟು ಅನುದಾನವನ್ನು ನಿಗದಿಗೊಳಿಸಿದ್ದು, ಉಳಿದ ರೂ.34.52 ಲಕ್ಷ ಅನುದಾನವನ್ನು ರಾಜ್ಯ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮಕ್ಕೆ ಬಳಸಿಕೊಳ್ಳುವುದು.

ಪ್ರತಿ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಯೋಜನಾ ಅನುಷ್ಠಾನಕ್ಕೆ ಕೆಳಕಂಡಂತೆ ಅನುದಾನವನ್ನು ನಿಗದಿಗೊಳಿಸಿದೆ.

| ಕ್ರ ಸಂ. | ವಿವರ | ನಿಗದಿಗೊಳಿಸಿರುವ ಅನುದಾನ | ಷರಾ |
|---|---|---|---|
| 1 | ತಾಲ್ಲೂಕು ಮಟ್ಟದಲ್ಲಿ ನಡೆಸುವ ಅರಿವಿನ ಸಭೆ: ಪ್ರತಿ ತಾಲ್ಲೂಕಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಒಂದು ಸಭೆ ಯಂತೆ 176 ತಾಲ್ಲೂಕುಗಳಲ್ಲಿ ನಡೆಸಲು | 4 x 2000 | 2000 x 176 x4 =14,08,000/- |
| 2 | ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಸುವ ಅರಿವಿನ ಸಭೆ: ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಪೋಷಕರಿಗೆ ಅರಿವು ಮೂಡಿಸುವ ಎರಡು ಸಭೆಗಳನ್ನು 6022 ಗ್ರಾಮ ಪಂಚಾಯಿತಿಗಳಲ್ಲಿ ನಡೆಸಲು. | 2 x 750 | 750 x 6022 x2 =90,33,000/- |
| 3 | ಶಾಲೆಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು: ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 5 ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. | 5 x 2000 | 2000 x 176 x 5 =17,60,000/- |
| 4 | ಪ್ರತಿ ಜಿಲ್ಲೆಗಳಲ್ಲಿ ಯೋಜನೆಗಳ ವಿವರಗಳನ್ನು ಹೊಂದಿರುವಂತಹ ಭಿತ್ತಿ ಪತ್ರ, ಹೋರ್ಡಿಂಗ್ಸ್, ಕೈಪಿಡಿ ಮುಂತಾದವುಗಳನ್ನು ಮುದ್ರಿಸಿ ಹಂಚುವುದು. (ಪ್ರತಿ ಜಿಲ್ಲೆಗೆ ವಾರ್ಷಿಕವಾಗಿ) | 20,000 x30 | 6,00,000/- |
| 5 | ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ, ತಾಲ್ಲೂಕು/ ಗ್ರಾಮಪಂಚಾಯತ್ ಮಟ್ಟದ ಅಧಿಕಾರಿಗಳಿಗೆ ವಿಕಲಚೇತನರ ಯೋಜನೆಗಳ ಬಗ್ಗೆ ಕಾರ್ಯಗಾರ ಹಾಗೂ ವಿಕಲಚೇತನರ ಪೋಷಕರಿಗೆ ಸಭೆ ನಡೆಸುವುದು. (ವಾರ್ಷಿಕವಾಗಿ ಎರಡು ಕಾರ್ಯಗಾರ) | 20,000x30 | 6,00,000/- |
| 6 | ಪ್ರತಿ ಜಿಲ್ಲೆಯಲ್ಲಿ ಸ್ಥಳೀಯ ಪತ್ರಿಕೆಗಳು, ರೇಡಿಯೋ, ದೃಶ್ಯ ಮಾಧ್ಯಮಗಳ ಮುಖಾಂತರ ಯೋಜನೆಗಳ ಬಗ್ಗೆ ಹಾಗೂ ಅಂಗವಿಕಲ ವ್ಯಕ್ತಿಗಳ ಸಾಧನೆಯ ಬಗ್ಗೆ ಪ್ರಚಾರಗೊಳಿಸುವುದು. (ವಾರ್ಷಿಕ) | 20,000 x 30 | 6,00,000/- |
| 7 | ರಾಜ್ಯ ಮಟ್ಟದಲ್ಲಿ ಅರಿವು ಮೂಡಿಸಲು (ರಾಜ್ಯ ಮಟ್ಟದ ಪತ್ರಿಕೆ, ರೇಡಿಯೋ, ದೃಶ್ಯ ಮಾಧ್ಯಮಗಳ ಮುಖಾಂತರ) (ವಾರ್ಷಿಕ) | 9,99,000/- | 9,99,000/- |
| | ಒಟ್ಟು ಅನುದಾನ | - | 1,50,00,000 |

ರಾಜ್ಯ ಮಟ್ಟದಲ್ಲಿ ಅಂಗವಿಕಲರಿಗಾಗಿರುವಂತಹ ಯೋಜನೆಗಳನ್ನು ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆಗೈದಂತಹ ಅಂಗವಿಕಲರ ಬಗ್ಗೆ ರಾಜ್ಯವ್ಯಾಪಿ ಕನಿಷ್ಠ ಎರಡು ದಿನಪತ್ರಿಕೆಗಳಲ್ಲಿ (ಕನ್ನಡ, ಆಂಗ್ಲ), ದೂರದರ್ಶನ ಮಾಧ್ಯಮಗಳಲ್ಲಿ, ರೇಡಿಯೊಗಳಲ್ಲಿ ಪ್ರಚಾರಗೊಳಿಸುವುದು.

**<u>ದಾಖಲೆಗಳ ನಿರ್ವಹಣೆ:</u>**

ಈ ಯೋಜನೆಯಡಿ ನಿರ್ವಹಿಸುವಂತಹ ಕಾರ್ಯಕ್ರಮಗಳ ಬಗ್ಗೆ ಸಂಪೂರ್ಣವಾದ ಖರ್ಚು ವೆಚ್ಚಗಳ ಬಗ್ಗೆ ದಾಖಲೆ ಹಾಗೂ ವರದಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ನಿರ್ವಹಿಸತಕ್ಕದ್ದು ಮತ್ತು ಅನುಷ್ಠಾನಗೊಳಿಸಿದ ಯೋಜನೆಯ ಪ್ರಗತಿಯ ವರದಿಯನ್ನು ಇಲಾಖೆಗೆ ತ್ರೈಮಾಸಿಕವಾಗಿ ತಪ್ಪದೇ ಸಲ್ಲಿಸುವುದು. ಸದರಿ ಯೋಜನೆಯಡಿ ನಿರ್ವಹಿಸುವ ಕಾರ್ಯಕ್ರಮಗಳಿಗೆ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ನೆರವನ್ನು ಪಡೆದು ಕಾರ್ಯಕ್ರಮಗಳ ಬಗ್ಗೆ ಪ್ರಚಾರವನ್ನು ನಡೆಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

12/1/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ,2ನೇ ಮಹಡಿ,ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ. ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(10), ವಿಧಾನ ಸೌಧ, ಬೆಂಗಳೂರು
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.